ಜುಲೈ ೨೦೨೧ | JULY 2021

# ಸೈಬರ್ ವಾರ್ತಿಕಾ
# CYBER VARTIKA

## ಮುನ್ನುಡಿ /Foreword

ನಲ್ಮೆಯ ಓದುಗರೆ,

ನಾವು ಒಂದು ದೊಡ್ಡ ಬದಲಾವಣೆಯ ಸುಳಿಯಲ್ಲಿ ಸಿಲುಕಿದ್ದೇವೆ; ಅದು ಎಂತಹ ಬದಲಾವಣೆಯೆಂದರೆ, ಸೈಬರ್ ಅಪರಾಧ ಮತ್ತು ಸೈಬರ್ ದಾಳಿಗಳನ್ನು ನಿರ್ವಹಿಸುವ ಹೊಣೆಗಾರಿಕೆಯನ್ನು ಈಗ ನಾಗರಿಕರು ಕೂಡ ಸಮಾನವಾಗಿ ಹೊತ್ತುಕೊಳ್ಳಬೇಕಾಗಿದೆ. ಸೈಬರ್ ಭದ್ರತೆಯಲ್ಲಿ ನಾಗರಿಕರ ತೊಡಗಿಕೆಯ ಮೂರು ಕ್ಷೇತ್ರಗಳಲ್ಲಿ ಈ ಬದಲಾವಣೆ ಈಗ ಕಾಣಿಸಿಕೊಳ್ಳುತ್ತಿದೆ.

ಒಂದು, ನಾಗರಿಕರು ಸೈಬರ್-ತಿಳಿವು ಹಾಗೂ ಸೈಬರ್-ಅರಿವು ಮೂಡಿಸಿಕೊಳ್ಳಬೇಕೆಂದು ಈ ಬದಲಾವಣೆ ಕರೆ ಕೊಡುತ್ತದೆ. ಇದರಿಂದಾಗಿ ರಾಷ್ಟ್ರೀಯ ಸೈಬರ್ ರಕ್ಷಣೆಯ ಮೊದಲ ಹೋರಾಟವನ್ನು ಸಮಾಜವೇ ಮಾಡಬೇಕು. ಸೈಬರ್ ಅಪರಾಧ ಮತ್ತು ಸೈಬರ್ ದಾಳಿಗಳನ್ನು ಕೆಚ್ಚೆದೆಯಿಂದ ಎದುರಿಸಲು, ಸೈಬರ್ ಭದ್ರತೆಯ ಕುರಿತು ತಿಳಿವು ಮತ್ತು ಕಲಿಕೆ ಎಲ್ಲೆಡೆ ಹರಡಬೇಕು. ಚಿಕ್ಕದಾದ ಮತ್ತು ನಿರ್ದಿಷ್ಟ ವಿಷಯಗಳ ಬಗೆಗಿನ ಕಲಿಕೆಯ ಚಟುವಟಿಕೆ, ಸೆಮಿನಾರ್ ಮತ್ತು ಆನ್‌ಲೈನ್ ಮಾಡ್ಯೂಲ್‌ಗಳ ಮೂಲಕ ಈಗ ಇದು ಸಾಧ್ಯವಾಗಿದೆ. ಇದರಿಂದಾಗಿ ಕಲಿಕೆ ಎಂಬುದು ಸುಲಭವಾಗಿ ಎಲ್ಲರ ಕೈಗೆಟುಕುವಂತಾಗಿದೆ. ನೆನಪಿಡಿ, ಕಲಿಕೆ ಎಂಬುದು ಹಂತಹಂತವಾಗಿ ಮುಂದುವರಿಯುತ್ತಲೇ ಇರಬೇಕು.

ಎರಡು, ಸೈಬರ್ ಭದ್ರತೆಯಲ್ಲಿ ನಾವೆಲ್ಲರೂ ಒಂದು ತಂಡವಾಗಿ ಪಾಲ್ಗೊಳ್ಳಬೇಕು. ಸೈಬರ್ ಅಪರಾಧ ಮತ್ತು ಸೈಬರ್ ದಾಳಿಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವಂತೆ, ನಾಗರಿಕರಾಗಿ ನಮಗೆಲ್ಲಾ ಇರುವುದು ಒಂದೇ ದಾರಿ. ನಾವೆಲ್ಲರೂ ಒಟ್ಟಾಗಿ ಹೋರಾಡಬೇಕು. ಯಾವುದೇ ಸೈಬರ್ ದಾಳಿ ನಡೆದ ಕೂಡಲೇ, ಅದರ ಬಗ್ಗೆ ಸೈಬರ್ ಪೊಲೀಸರ ಬಳಿ ವರದಿ ಮಾಡಬೇಕು. ಸೈಬರ್ ಘಟನೆಗಳನ್ನು ವರದಿ ಮಾಡಿ, ತನಿಖೆ ನಡೆಸಿ, ಅದರ ಹಿಂದೆ ಯಾರ ಕೈವಾಡ ಇದೆ ಎಂದು ಕಂಡುಹಿಡಿಯುವಲ್ಲಿ ಸಮಯದ ಪಾತ್ರ ತುಂಬ ದೊಡ್ಡದು. ಸೆಂಟ್ರಲ್ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್ https://cybercrime.gov.in, ಕರ್ನಾಟಕದಲ್ಲಿರುವ ಸೈಬರ್ ಇಕನಾಮಿಕ್ಸ್ ಮತ್ತು ನಾರ್ಕೋಟಿಕ್ ಕ್ರೈಮ್ಸ್ (ಸಿಇಎನ್) ಪೊಲೀಸ್ ಸ್ಟೇಶನ್‌ಗಳು ಹಾಗೂ ಬೆಂಗಳೂರಿಗಾಗಿ ಇರುವ ಟೆಲಿಫೋನ್ ಸಹಾಯವಾಣಿ 112 ರಂತಹ ವೇದಿಕೆಗಳ ಮೂಲಕ ಸೈಬರ್ ಅಪರಾಧಕ್ಕೆ ತುತ್ತಾದ ನಾಗರಿಕರು ಪರಿಹಾರ ಕಂಡುಕೊಳ್ಳಬಹುದು.

ಮೂರು, ಆಪ್ತರ ಮಾರ್ಗದರ್ಶನ ದೊರೆತರೆ ಕಲಿಕೆಗೆ ನೆರವಾಗುತ್ತದೆ. ಸೈಬರ್ ಭದ್ರತೆಯ ವಿಷಯದಲ್ಲಿ, ಕರ್ನಾಟಕದಲ್ಲಿರುವ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ಬಹಳ ನೆರವಾಗಬಲ್ಲದು. ಜಗತ್ತಿನ ದೊಡ್ಡ ಮಾಹಿತಿ ತಂತ್ರಜ್ಞಾನ ಮತ್ತು ಸೈಬರ್ ಭದ್ರತೆ ಕಂಪನಿಗಳ ಇಂಜಿನಿಯರಿಂಗ್ ಕ್ಯಾಂಪಸ್‌ಗಳು ನಮ್ಮ ರಾಜ್ಯದಲ್ಲಿರುವುದು ನಮಗೆಲ್ಲ ತಿಳಿದಿದೆ. ಈ ಕಂಪನಿಗಳ ಹಲವಾರು ತಂತ್ರಜ್ಞಾನ ಪರಿಣತರು, ಇಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ಮಾರ್ಗದರ್ಶನದ ಚೌಕಟ್ಟನ್ನು ಒದಗಿಸಲು ಮತ್ತು ಅವುಗಳಿಗೆ ಬೆಂಬಲ ನೀಡುತ್ತಾ ತೊಡಗಿಸಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಬಹುದು. ವಿದ್ಯಾರ್ಥಿಗಳು ಮತ್ತು ನಾಗರಿಕರ ಕಲಿಕೆ ಮತ್ತು ಕೌಶಲ್ಯವನ್ನು ಹೆಚ್ಚಿಸುವ ಇಂತಹ ತೊಡಗಿಕೆಗಳನ್ನು ಸೈಸೆಕ್ ನಡೆಸಿಕೊಡಬಹುದು ಎಂದು ನಾವು ನಂಬಿದ್ದೇವೆ.

ನಿಮಗೆಲ್ಲಾ ಸವಿಹಾರೈಕೆಗಳು,
ಕೆಪಿಎಂ ದಾಸ್
ರಾಷ್ಟ್ರೀಯ ಸೈಬರ್ ಭದ್ರತಾ ಅಧಿಕಾರಿ, ಸಿಸ್ಕೋ

Dear Readers,

We are in the midst of a major change; a change where the responsibility of managing cyber crime and cyber attacks is now shifting to the citizen in equal measure. This change is now manifesting in three areas of citizens engagement in cybersecurity.

One, this change asks the citizen to be cyber-aware and cyber-educated so that first line of national cyber defence rests on the society. Fundamental to building this strong defence against cybercrime and cyber attacks is to spread learning and awareness about cybersecurity. This is now possible through short and subject specific learning sessions, seminars and online modules thus making learning an accessible and affordable activity. Remember, learning is continuous and incremental.

Two, cybersecurity is a team sport. With cybercrime and cyberattacks increasing day by day, the only way for us as citizens is to collaborate amongst ourselves to share information about cyber incidents, report and seek assistance from the law enforcement and state govt authorities soon as the incidents occur. Time is critical to report, investigate and find the malicious actors behind the cyber incidents. The cyber foundations in the form of the central cyber crime reporting portal https://cybercrime.gov.in/, Cyber Economics & Narcotic Crimes (CEN) police stations in Karnataka and the 112 telephone helpline for Bengaluru are examples of platforms where citizens can seek redressal in the event of cybercrime and cyber incidents.

Three, mentorship and guidance is an enabler to learning. The IT eco system in Karnataka can be a great enabler in cybersecurity. We know that the biggest IT and cybersecurity companies in the world have their engineering campuses in the state. Many of the technical leaders in this industry can potentially play a role in providing the mentoring frameworks and supportive engagements to the academic institutions here. We are hopeful that CySecK can drive such engagements where we multiply the learning and skilling opportunities for the students and citizens.

Best Wishes,
KPM Das
National Cyber Security Officer at Cisco

# ಪ್ರಮುಖ ಸೈಬರ್ ಸುದ್ದಿ

**2021 ರ ಮೊದಲ ಮೂರು ತಿಂಗಳಲ್ಲಿ ಭಾರತದಲ್ಲಿ 2 ಲಕ್ಷ ತಾಂತ್ರಿಕ ನೆರವು ಹಗರಣಗಳು ವರದಿಯಾಗಿವೆ**

ಈ ವರ್ಷದ ಮೊದಲ ಮೂರು ತಿಂಗಳಲ್ಲಿ, 2 ಲಕ್ಷಕ್ಕಿಂತ ಹೆಚ್ಚು ತಾಂತ್ರಿಕ ನೆರವು ಹಗರಣದ ದಾಳಿಗಳನ್ನು ಕಂಡುಹಿಡಿದಿರುವುದಾಗಿ ಸಂಶೋಧಕರು ಹೇಳಿಕೊಂಡಿದ್ದಾರೆ. ತಾಂತ್ರಿಕ ನೆರವು ಹಗರಣಗಳಲ್ಲಿ, ಜನರಿಗೆ ತಮ್ಮ ಕಂಪ್ಯೂಟರ್, ಡಿವೈಸ್ ಇಲ್ಲವೇ ಸಾಫ್ಟ್‌ವೇರ್ ತೊಂದರೆಗಳನ್ನು ಬಗೆಹರಿಸಲು "ನೆರವು ಸೇವೆ"ಗಳಿಗೆ ಅವರು ದುಬಾರಿ ಬೆಲೆ ತೆರುವಂತೆ ಅವರನ್ನು ಹೆದರಿಸುವ ತಂತ್ರಗಳನ್ನು ಮೋಸಗಾರರು ಬಳಸುತ್ತಾರೆ.

**ದಯವಿಟ್ಟು ನೆನಪಿಡಿ: ನಿಮ್ಮನ್ನು ಬಲವಂತಪಡಿಸುವವರಿಗೆ ಎಂದಿಗೂ ಆಕ್ಸೆಸ್ ಕೊಡಬೇಡಿ. ಮೋಸಗಾರರು ನಿಮ್ಮ ಡಿವೈಸ್‌ಗಳಲ್ಲಿ ಬೇಡದ ಇಲ್ಲವೇ ಅಪಾಯಕಾರಿ ಪ್ರೋಗ್ರಾಮ್‌ಗಳನ್ನು ಇನ್‌ಸ್ಟಾಲ್ ಮಾಡಿ, ನಿಮ್ಮ ಡೇಟಾಗೆ ಹಾನಿ ಉಂಟುಮಾಡಬಹುದು. ಅಲ್ಲದೆ, ನಿಮ್ಮ ವೈಯಕ್ತಿಕ ಮಾಹಿತಿಯನ್ನು ಕೂಡ ಕದಿಯಬಹುದು.**

**ಹ್ಯಾಕರ್‌ಗಳು ಫೇಸ್‌ಬುಕ್ ಬಳಕೆದಾರರಿಗೆ ಅಪಾಯಕಾರಿ ಸಾಫ್ಟ್‌ವೇರ್ ತುಂಬಿದ ಕಾಪಿರೈಟ್ ದೂರು ನೋಟಿಸ್‌ಗಳನ್ನು ಕಳುಹಿಸುತ್ತಿದ್ದಾರೆ**

ಸೈಬರ್ ಕಳ್ಳರು ಫೇಸ್‌ಬುಕ್ ಬಳಕೆದಾರರಿಗೆ, ಕಂಪ್ಯೂಟರ್‌ಗಳನ್ನು ಹಾನಿ ಮಾಡಬಹುದಾದ ಅಪಾಯಕಾರಿ ಲಿಂಕ್‌ಗಳನ್ನು ಹೊಂದಿರುವ ನಕಲಿ ಕಾಪಿರೈಟ್ ದೂರು ನೋಟಿಸ್‌ಗಳನ್ನು ಕಳಿಸುತ್ತಿದ್ದಾರೆ ಎಂದು ಭದ್ರತೆಯ ಸಂಶೋಧಕರೊಬ್ಬರು ಎಚ್ಚರಿಸಿದ್ದಾರೆ. ಬಳಕೆದಾರರಿಗೆ ಇದರ ಬಗ್ಗೆ ಎಚ್ಚರವಾಗಿರುವಂತೆ ಸಂದೇಶ ಕಳುಹಿಸುತ್ತಿರುವುದಾಗಿ ಫೇಸ್‌ಬುಕ್‌ನ ಭದ್ರತೆಯ ತಂಡದವರು ಹೇಳಿದ್ದಾರೆ.

**ದಯವಿಟ್ಟು ನೆನಪಿಡಿ: ಜಗತ್ತಿನ ಉದ್ದಗಲಕ್ಕೂ ಇರುವ ರಾಜಕಾರಣಿಗಳು, ಜನಪ್ರಿಯ ವ್ಯಕ್ತಿಗಳು, ಮಾಧ್ಯಮದವರು ಹಾಗೂ ಹೆಸರಾಂತ ಫೇಸ್‌ಬುಕ್ ಬಳಕೆದಾರರನ್ನು ಹ್ಯಾಕರ್‌ಗಳು ಗುರಿಯಾಗಿಸಿದ್ದಾರೆ. ಫೇಸ್‌ಬುಕ್‌ನಲ್ಲಿ, ನಿಮಗೆ ತಪ್ಪಾದ ಕಾಪಿರೈಟ್ ದೂರು ನೋಟಿಸ್ ಬಂದರೆ, ಅದರಲ್ಲಿರುವ ಲಿಂಕ್ ಅನ್ನು ಕ್ಲಿಕ್ ಮಾಡಬೇಡಿ. ಅದರಲ್ಲಿ ತುಂಬ ಅಪಾಯಕಾರಿ ಸಾಫ್ಟ್‌ವೇರ್ ಇರುಬಹುದು.**

**ಕೆಲಸದಿಂದ ನಿವೃತ್ತರಾದವರನ್ನು ಗುರಿಯಾಗಿಸಿದ ಆನ್‌ಲೈನ್ ಮೋಸದ ಬಗ್ಗೆ ರೈಲ್ವೆ ಸಚಿವಾಲಯ ಬ್ಯಾಂಕುಗಳಿಗೆ ಎಚ್ಚರಿಕೆ ನೀಡಿದೆ**

ಹೊಸ ಆನ್‌ಲೈನ್ ಹಗರಣವೊಂದರಲ್ಲಿ, ಸೈಬರ್ ಅಪರಾಧಿಗಳು ಪಿಂಚಣಿದಾರರನ್ನು ಗುರಿಯಾಗಿಸಿದ್ದಾರೆ. ಪಿಂಚಣಿ ಹಂಚುವ ಅಧಿಕಾರಿಗಳ ಸೋಗಿನಲ್ಲಿ ಈ ಅಪರಾಧಿಗಳು, ಪಿಂಚಣಿದಾರರಿಗೆ ಅವರ ಡಿಜಿಟಲ್ ಜೀವನ ಪ್ರಮಾಣಪತ್ರವನ್ನು ಹೊಸದಾಗಿಸುವಂತೆ ಕೇಳಿಕೊಳ್ಳುತ್ತಿದ್ದಾರೆ. ನಿವೃತ್ತರಾದವರ ಸೇವೆಯ ದಾಖಲೆಗಳನ್ನು ಮೋಸಗಾರರು ಈ ದಾರಿಯ ಮೂಲಕ ಪಡೆಯುತ್ತಿರುವ ಬಗ್ಗೆ ರೈಲ್ವೆ ಸಚಿವಾಲಯ ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಎಚ್ಚರಿಕೆ ನೀಡಿದೆ.

**2021 ರ ಮೊದಲಾರ್ಧದಲ್ಲಿ, ಭಾರತದಲ್ಲಿ 6.07 ಲಕ್ಷಕ್ಕಿಂತ ಹೆಚ್ಚು ಸೈಬರ್ ಭದ್ರತೆಯ ಘಟನೆಗಳು ನಡೆದಿರುವ ವರದಿಯಾಗಿದೆ**

2021 ರ ಮೊದಲಾರ್ಧದಲ್ಲಿ, ದೇಶದಲ್ಲಿ 6.07 ಲಕ್ಷಕ್ಕಿಂತ ಹೆಚ್ಚು ಸೈಬರ್ ಭದ್ರತೆಯ ಘಟನೆಗಳು ನಡೆದಿವೆ ಎಂದು ಸಂಸತ್ತಿಗೆ ತಿಳಿಸಲಾಯಿತು. CERT-In ಪ್ರಕಾರ, ಒಟ್ಟು 3,94,499, 11,58,208, ಮತ್ತು 6,07,220 ಸೈಬರ್ ಭದ್ರತೆಯ ಘಟನೆಗಳು ಕ್ರಮವಾಗಿ 2019, 2020 ಮತ್ತು 2021 ರಲ್ಲಿ ವರದಿಯಾಗಿವೆ (ಜೂನ್ ವರೆಗೆ).
ರಾಷ್ಟ್ರೀಯ ಸೈಬರ್‌ಸ್ಪೇಸ್ ಭದ್ರತೆಯ ಸವಾಲುಗಳನ್ನು ಸಮಗ್ರವಾಗಿ ಪರಿಹರಿಸಲು ಸರ್ಕಾರವು ರಾಷ್ಟ್ರೀಯ ಸೈಬರ್ ಭದ್ರತೆ ಕಾರ್ಯತಂತ್ರ 2021 (ಎನ್‌ಸಿಎಸ್‌ಎಸ್ 2021) ಕರಡನ್ನು ರೂಪಿಸಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

# ಆನ್‌ಲೈನ್ ಮೋಸಗಳ ಸುದ್ದಿ

**"ದುಬಾರಿ ಉಡುಗೊರೆ"ಗಳನ್ನು ಕೊಡಿಸುವುದಾಗಿ ನಂಬಿಸಿ, ಸೈಬರ್ ಅಪರಾಧಿಗಳು ಇಬ್ಬರು ಹೆಂಗಸರಿಗೆ 13 ಲಕ್ಷ ರೂಪಾಯಿ ಮೋಸಮಾಡಿದ್ದಾರೆ**

**ಆನ್‌ಲೈನ್ ಮೋಸದಲ್ಲಿ 24,000 ರೂಪಾಯಿ ಕಳೆದುಕೊಂಡ 49 ರ ಹರೆಯದ ಹೆಂಗಸು**

# ಪ್ರಮುಖ ಸೈಬರ್ ಸುದ್ದಿ

**<u>ಬಾಸ್ಕೆಟ್‌ಬಾಲ್ ಕೋಚ್ ಮತ್ತು ಸೇನೆಯವರೊಬ್ಬರನ್ನು ಗುರಿಯಾಗಿಸಿದ ಆನ್‌ಲೈನ್ ಮೋಸಗಾರರು</u>**

**<u>ಒಡವೆ ವ್ಯಾಪಾರಿಯ ಸೋಗಿನಲ್ಲಿ ಸೈಬರ್ ಅಪರಾಧಿಯೊಬ್ಬ ಸಾಫ್ಟ್‌ವೇರ್ ಕಂಪನಿ ಉದ್ಯೋಗಿಯಿಂದ 1.22 ಲಕ್ಷ ರೂಪಾಯಿ ದೋಚಿದ್ದಾನೆ</u>**

**<u>OLXನಲ್ಲಿ ಹಳೆಯ ಶೂಗಳನ್ನು ಮಾರಾಟ ಮಾಡಲು ಪ್ರಯತ್ನಿಸುವಾಗ ಏರ್‌ಲೈನ್ ಉದ್ಯೋಗಿ 1.05 ಲಕ್ಷ ರೂಪಾಯಿ ಕಳೆದುಕೊಂಡರು</u>**

**<u>ಹದಿಹರೆಯದ ಮೂವರು ಆನ್‌ಲೈನ್ ಮೋಸದಲ್ಲಿ 1.50 ಲಕ್ಷ ರೂಪಾಯಿ ಕಳೆದುಕೊಂಡರು</u>**

**<u>ನಕಲಿ ಫೇಸ್‌ಬುಕ್ ಗೆಳತಿಯಿಂದ 1.06 ಲಕ್ಷ ರೂಪಾಯಿ ಮೋಸಕ್ಕೆ ಒಳಗಾದ ಬ್ಯಾಂಕ್ ಉದ್ಯೋಗಿ</u>**

**ದಯವಿಟ್ಟು ನೆನಪಿಡಿ: ನೀವು ಆನ್‌ಲೈನ್ ಮೋಸಕ್ಕೆ ಒಳಗಾಗಿದ್ದರೆ, ಮೋಸ ನಡೆದ ಎರಡು ಗಂಟೆಗಳ ಒಳಗೆ ಅಧಿಕಾರಿಗಳನ್ನು ಸಂಪರ್ಕಿಸಿ. ಈ ಸಮಯಕ್ಕೆ ತುಂಬ ಮಹತ್ವವಿದೆ. ಏಕೆಂದರೆ ಈ ಸಮಯದಲ್ಲಿ ಖಾತೆಗಳನ್ನು ತಡೆಹಿಡಿಯುವುದು, ಮುಂದಿನ ವಹಿವಾಟುಗಳನ್ನು ನಿಲ್ಲಿಸುವುದು ಮತ್ತು ಹಣವನ್ನು ಮರಳಿ ಪಡೆಯುವ ಸಾಧ್ಯತೆ ಹೆಚ್ಚಿದೆ. ಆನ್‌ಲೈನ್‌ನಲ್ಲಿ ಹಣದ ವಹಿವಾಟು ನಡೆಸುವಾಗ ಯಾವಾಗಲೂ ಹುಶಾರಾಗಿರಿ. ಸೈಬರ್ ಎಚ್ಚರಿಕೆಯಿಂದಿರಿ.**

## ಪೆಗಸಸ್ ಸುದ್ದಿ

ಪೆಗಸಸ್ ವಿವಾದ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದೆ. ಪೆಗಸಸ್ ಎಂಬುದು ಇಸ್ರೇಲಿನ ಸೈಬರ್ ಶಸ್ತ್ರಾಸ್ತ್ರ ಸಂಸ್ಥೆ ಅಭಿವೃದ್ಧಿ ಪಡಿಸಿರುವ ಒಂದು ಸ್ಪೈವೇರ್ ಆಗಿದೆ. ಸೈಬರ್ ಅಪರಾಧಿಗಳು ಅಪಾಯಕಾರಿ ಸಾಫ್ಟ್‌ವೇರ್ ಬಳಸಿ ಜನರಿಂದ ಹಣ ಕದಿಯುವಂತಲ್ಲ ಇದು. ಪೆಗಸಸ್ ಅನ್ನು ಬರೀ ಬೇಹುಗಾರಿಕೆಗಾಗಿ ಬಳಸಲಾಗುತ್ತದೆ.

ಅದು ಒಂದು ಸ್ಮಾರ್ಟ್‌ಫೋನನ್ನು ಪೂರ್ತಿಯಾದ ಕಣ್ಗಾವಲು ಯಂತ್ರದಂತೆ ಮಾರ್ಪಡಿಸಬಲ್ಲದು. ಅದು ಫೋನಿನಲ್ಲಿರುವ ಎಸ್‌ಎಮ್‌ಎಸ್, ವಾಟ್ಸಾಪ್ ಸಂದೇಶ, ಇಮೇಲ್ ಮತ್ತು ಬೇರೆ ಬಗೆಯ ಸಂದೇಶಗಳನ್ನು ಓದಬಲ್ಲದು. ನಿಮ್ಮ ಡಿವೈಸ್‌ನಲ್ಲಿರುವ ಫೋಟೊಗಳನ್ನು ಕದಿಯುವುದಷ್ಟೇ ಅಲ್ಲ, ಒಳಬರುವ ಮತ್ತು ಹೊರಹೋಗುವ ಕರೆಗಳನ್ನು ಕೂಡ ಅದು ರೆಕಾರ್ಡ್ ಮಾಡಿಟ್ಟುಕೊಳ್ಳಬಹುದು. ಮೈಕ್ರೋಫೋನ್ ಮತ್ತು ಕ್ಯಾಮರಾ ಸಕ್ರಿಯಗೊಳಿಸಿ, ಅದು ಮಾತುಕತೆಯನ್ನು ರೆಕಾರ್ಡ್ ಮಾಡಬಹುದು. ಹಿಂದಿನ ಮತ್ತು ಈಗಿನ ಲೊಕೇಶನ್ ಡೇಟಾ ತಿಳಿದುಕೊಳ್ಳುವ ಸಾಮರ್ಥ್ಯ ಕೂಡ ಅದಕ್ಕಿದ್ದು, ಯಾರ ಮೇಲೆ ಒಂದು ಕಣ್ಣಿಡಲಾಗಿದೆಯೊ, ಅವರ ಬಗ್ಗೆ ತಿಳಿಯಲು ಏನೇನಿದೆಯೊ ಅದೆಲ್ಲವನ್ನೂ ತಿಳಿದುಕೊಳ್ಳಲು ನೆರವಾಗಬಲ್ಲದು.



ಪೆಗಸಸ್ ವಿವಾದದಿಂದ, ಈ ಹೊತ್ತಿಗೆ ಕೇಳಲೇಬೇಕಾದ ಹಲವಾರು ಪ್ರಶ್ನೆಗಳು ಎದ್ದಿವೆ. ಪೆಗಸಸ್ ಅನ್ನು ಮೊದಲಿಗೆ, ಸೈಬರ್ ಅಪರಾಧಕ್ಕೆ ಕಡಿವಾಣ ಹಾಕಲು ಮತ್ತು ಉಗ್ರವಾದಿಗಳ ಮೇಲೆ ಒಂದು ಕಣ್ಣಿಡಲು ಉಂಟುಮಾಡಲಾಯಿತು. ಭಾರತವು ಕಟ್ಟುನಿಟ್ಟಿನ ಡೇಟಾ ರಕ್ಷಣೆ ಕಾನೂನಿನ ಕಡೆಗೆ ಹೊರಳುತ್ತಿರುವ ಈ ಹೊತ್ತಿನಲ್ಲಿ, ಕಣ್ಗಾವಲಿಗೆ ಬಳಸಲಾಗುತ್ತಿರುವ ಈ ಸ್ಪೈವೇರ್‌ನಿಂದಾಗಿ ಡೇಟಾ ಭದ್ರತೆ ಮತ್ತು ನಾಗರಿಕರ ಗೌಪ್ಯತೆ ಬಗ್ಗೆ ಗಂಭೀರ ಪ್ರಶ್ನೆಗಳು ಏಳುತ್ತಿವೆ.

ಫೋನ್ ತಯಾರಕರ ಮೇಲೆ ಈಗ ಎಲ್ಲರ ಗಮನವಿದೆ. ತಾವು ತಯಾರಿಸುವ ಡಿವೈಸ್‌ಗಳಲ್ಲಿ ಗೌಪ್ಯತೆಯನ್ನು ಡಿಸೈನ್ ಹಂತದಲ್ಲೇ ಸೇರಿಸುವುದು ಇನ್ನು ಮುಂದೆ ಸಾಧ್ಯವೇ ಎಂದು ಅವರು ಯೋಚಿಸುತ್ತಿದ್ದಾರೆ. ಸ್ಪೈವೇರ್ ಹ್ಯಾಕ್ ಆಗಿ ಇದರ ಆ್ಯಪ್ ಡಾರ್ಕ್ ವೆಬ್ ನಲ್ಲಿ ಹರಿಬಿಟ್ಟರೆ ಎಂತಹ ಕೆಡುಕುಂಟಾಗಬಹುದು ಎಂಬ ಹೆದರಿಕೆಯೂ ಕಾಡುತ್ತಿದೆ. ಎಲ್ಲಾ ನಾಗರಿಕರಿಗೂ ಡೇಟಾ ಗೌಪ್ಯತೆಯ ಹಕ್ಕು ಸಿಗುವಂತಾಗಲು ಸರ್ಕಾರವು ಇನ್ನಷ್ಟು ಕಟ್ಟುನಿಟ್ಟಿನ ಕಾನೂನು ಚೌಕಟ್ಟನ್ನು ರಚಿಸಬೇಕು.

# Top Cyber News

## 2 lakh tech support scams reported in India in the first quarter of 2021

Researchers claim that in the first quarter of this year, they detected more than 2,00,000 tech support scam attacks in India. In tech support scams, fraudsters use fear tactics to persuade people to pay for overpriced "help services" to cure their computer, device, or software issue.

**Please remember: Never grant access when you are forced to, fraudsters might install malware or other dangerous programmes on devices, causing damage to the data stored on them or, worse, harvesting personal information.**

## Hackers are sending malware-infected copyright complaint notices to Facebook users

A security researcher warns that cyber thieves are sending out phoney copyright complaint notices to Facebook users containing harmful links that might harm computers. The Facebook Security Team claims to be sending the warning message to users.

**Please remember: Hackers are targeting politicians, celebrities, media professionals, and famous Facebook users all around the world. On Facebook, if you get a false Copyright Complaint notification, do not click on the link. Such links can contain highly infectious malware.**

## Ministry of railways alert banks of online fraud aimed towards retirees

Cyber criminals have begun targeting pensioners in a new online scam, posing as pension-disbursing officials, and requesting pensioners to renew their Digital Life Certificate (Jeevan Praman Patr) online. The Ministry of Railways has issued a warning to all public sector banks regarding the fraudsters' methods for gaining access to retirees' service records.

## First half of 2021, reported over 6.07 lakh cyber security incidents in India

Parliament was informed that over 6.07 lakh cyber security incidents occurred in the country in the first half of 2021. According to CERT-In, a total of 3,94,499, 11,58,208, and 6,07,220 cyber security incidents were reported in the years 2019, 2020, and 2021 respectively (up to June).
Rajeev Chandrasekhar, Minister of State for Electronics and Information Technology, said the government has formulated a draft- National Cyber Security Strategy 2021 (NCSS2021) to address national cyberspace security challenges holistically.

# News of online frauds

## On the guise of offering "expensive gifts," cyber criminals deceive two women of Rs 13 lakh

## 49-year-old woman defrauded of Rs 24,000 in online fraud

# Top Cyber News

**Online fraudsters target basketball coach and an army man**

**Techie Duped of Rs 1.22 Lakh by a cybercriminal disguised as Jeweller**

**Airline employee loses ₹1.05 lakh while trying to sell old pair of shoes on OLX**

**Online scam costs three teenagers Rs. 1.50 lakh**

**Banker duped of ₹1.06 lakh by a fake Facebook friend**

**Please remember: If you are a victim of online fraud, contact the authorities during the first two hours of the fraud, also known as the "golden hour". Chances of freezing the accounts, stopping future transactions, and recovering the funds are high during that period. Always be careful while transacting money online, stay cautious and remain cyber alert.**

## Pegasus News

The Pegasus controversy has stirred up a global controversy. Pegasus is a spyware developed by an Israeli cyber arms firm. Unlike the malware used by cybercriminals to cheat their victims by stealing money, Pegasus is used only for spying.



It can transform a smart phone into a full-fledged surveillance device. It can access the victim's SMS, WhatsApp messages, emails, and other types of messages. It also has the ability to record incoming and outgoing calls, as well as steal photos on the device. It can record conversations by activating the microphone and camera. It has the ability to access past and current location data, and can help determine practically everything there is to know about someone who is being tracked.

The Pegasus controversy has raised several questions. Pegasus was initially designed to tackle cybercrime, and track terrorists. While India is moving towards a more stringer data protection law, the spyware being used for surveillance raises serious concerns regarding data security and privacy of citizens.

This has also put the spotlight on phone manufacturers, who are left wondering if they can hereafter ensure privacy by design, in their devices. Fears as to what might unfold if the spyware is hacked into and finds its way to the dark web, are a valid concern. The government must create more stringent framework to ensure that data privacy as a right, is secured for all its citizens.

# ಸೈಸೆಕ್ ಜಾಗೃತಿ ಭಂಡಾರ

## ಸೈಬರ್ ಪೀಡನೆ ಎಂದರೇನು?

ಡಿಜಿಟಲ್ ತಂತ್ರಜ್ಞಾನಗಳನ್ನು ಬಳಸಿಕೊಂಡು ಬೆದರಿಸುವುದಕ್ಕೆ ಸೈಬರ್ ಪೀಡನೆ ಎನ್ನಲಾಗುತ್ತದೆ. ಇದು ಸಾಮಾಜಿಕ ಮಾಧ್ಯಮ, ಮೆಸೇಜಿಂಗ್ ಅಪ್ಲಿಕೇಶನ್, ಆಟದ ಪ್ಲಾಟ್‌ಫಾರಂ ಹಾಗೂ ಮೊಬೈಲ್ ಫೋನ್‌ಗಳಲ್ಲಿ ನಡೆಯಬಹುದು. ಸೈಬರ್ ಪೀಡನೆಗಳಿಗೆ ಹೆಚ್ಚಾಗಿ ಹದಿಹರೆಯದವರು ಒಳಗಾಗುತ್ತಾರೆ. ಆದರೆ ದೊಡ್ಡವರು ಕೂಡ ಸೈಬರ್ ಪೀಡನೆ ಮತ್ತು ಸಾರ್ವಜನಿಕ ಅವಮಾನಗಳಿಗೆ ತುತ್ತಾಗುವುದು ಸಾಮಾನ್ಯವಾಗಿದೆ.

ಸೈಬರ್ ಪೀಡನೆಯ ಉದಾಹರಣೆಗಳು:

·ಬೇರೆಯವರ ವೈಯಕ್ತಿಕ ಇಲ್ಲವೇ ಖಾಸಗಿ ಮಾಹಿತಿಯನ್ನು ಹಂಚುವುದು. ಇದರಿಂದ ಕಿರಿಕಿರಿ ಇಲ್ಲವೇ ಅವಮಾನ ಉಂಟುಮಾಡುವುದು.

·ಮೆಸೇಜಿಂಗ್ ಪ್ಲಾಟ್‌ಫಾರಂಗಳ ಮೂಲಕ ನೋವುಂಟುಮಾಡುವ ಸಂದೇಶಗಳನ್ನು ಕಳಿಸುವುದು.

·ಒಬ್ಬರ ಸೋಗಿನಲ್ಲಿ ಮತ್ತೊಬ್ಬರಿಗೆ ಕೆಡುಕಿನ/ತಪ್ಪು ಸಂದೇಶಗಳನ್ನು ಕಳಿಸುವುದು.




# ಸೈಬರ್ ಪೀಡನೆ

## ಪೋಷಕರಿಗಾಗಿ ತಿಳಿವು

ಎಲ್ಲವೂ ಡಿಜಿಟಲ್ ಆಗಿರುವ ಇಂದಿನ ದಿನಗಳಲ್ಲಿ, ಸೈಬರ್ ಅಪಾಯಗಳ ಬಗ್ಗೆ ಪೋಷಕರು ಎಚ್ಚರಿಕೆಯಿಂದಿರಬೇಕು. ತಮ್ಮ ಮಕ್ಕಳೊಂದಿಗೆ ಮಾತನಾಡಿ ಅವರ ಸೈಬರ್ ಚಟುವಟಿಕೆಗಳು ಸುರಕ್ಷಿತ ಮತ್ತು ಆರೋಗ್ಯವಾಗಿರುವಂತೆ ನೋಡಿಕೊಳ್ಳಬೇಕು.

ಪೋಷಕರು;

- ಮಕ್ಕಳೊಂದಿಗೆ ತೆರೆದ ಮನಸ್ಸಿನ ನಂಬುಗೆಯ ನಂಟು ಹೊಂದಿರಬೇಕು.
- ಇಂಟರ್‌ನೆಟ್ ಸುರಕ್ಷತೆಯ ಬಗ್ಗೆ ಮಕ್ಕಳಿಗೆ ಹೇಳಿಕೊಡಬೇಕು.
- ಸರಿಯಾದ ಡಿಜಿಟಲ್ ನಡವಳಿಕೆಯ ಬಗ್ಗೆ ಕಟ್ಟುಪಾಡುಗಳನ್ನು ಹಾಕಬೇಕು.
- ಸುಲಭವಾಗಿ ನಿಗಾವಹಿಸಬಹುದಾದ ಜಾಗದಲ್ಲಿ ಡಿವೈಸ್ ಇಡಬೇಕು.
- ತಮ್ಮ ಮಕ್ಕಳಿಗೆ ಗೌಪ್ಯತೆ, ಮೋಸಗಾರರು, ಅಶ್ಲೀಲತೆ ಮತ್ತು ಪಾಪ್-ಅಪ್‌ಗಳ ಬಗ್ಗೆ ತಿಳಿಸಬೇಕು.
- ಶಿಕ್ಷೆ ನೀಡುವುದಕ್ಕಿಂತ ಪರಿಹಾರ ಕಂಡುಕೊಳ್ಳುವುದು ಹೆಚ್ಚು ಮುಖ್ಯ ಎಂಬುದನ್ನು ಯಾವಾಗಲೂ ನೆನಪಿಡಬೇಕು.

## ಸೈಬರ್ ಪೀಡನೆಗೆ ಶಿಕ್ಷೆ

ಭಾರತದಲ್ಲಿ ಸೈಬರ್ ಬೆದರಿಕೆಯನ್ನು ಅಪರಾಧ ಕೃತ್ಯ ಎಂದು ಪರಿಗಣಿಸಲಾಗಿದೆ. ನೀವು ಸೈಬರ್ ಪೀಡನೆಯಿಂದ ನೊಂದವರಾದರೆ, ಪರಿಹಾರಕ್ಕಾಗಿ ಈ ಕೆಳಗಿನ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬಹುದು:

1.ಯಾವ ಖಾತೆಯಿಂದ ನಿಮಗೆ ಬೆದರಿಕೆ ಬಂದಿತೊ, ಆ ಖಾತೆಯನ್ನು ಕೂಡಲೇ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರಂನಲ್ಲಿ ರಿಪೋರ್ಟ್ ಮಾಡಿ.

2.ನ್ಯಾಶನಲ್ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್ - https://www.cybercrime.gov.in/ ನ ಅಧಿಕೃತ ವೆಬ್‌ಸೈಟ್‌ನಲ್ಲಿ ನಿಮಗೆ ಸೈಬರ್ ಬೆದರಿಕೆ ನೀಡಿದವರ ವಿರುದ್ಧ ದೂರು ಸಲ್ಲಿಸಬಹುದು.

CySecK Cyber Security Karnataka
K-Tech CoE for Cyber Security

# CySecK Awareness Repository

## What is Cyberbullying ?

Bullying taking place through the use of digital technologies is known as cyberbullying. It can happen on social media, messaging applications, gaming platforms and mobile phones. Cyberbullying involves tweens and teens mostly, but it's common for adults to experience cyberbullying and public shaming as well.

Examples of Cyberbullying include:

- Sharing personal or private information about someone, in turn causing embarrassment or humiliation.
- Sending hurtful messages via messaging platforms.
- Impersonating someone and sending harmful /false messages to others on their behalf.




# Cyber Bullying

## Awareness for parents

Parents must stay vigilant against cyber-risks in this hyper-digital environment, and work with their children to make their cyber space safe and healthy.

Parents must;

- Maintain open and honest relationship.
- Teach their children about Internet safety.
- Establish rules about appropriate digital behaviour.
- Keep the device in easily monitored location.
- Educate their children about 4 P's- privacy, predators, pornography, pop-ups.
- Always remember that solutions are more important than punishment.

## Punishment for cyberbullying

Cyber Bullying is considered as a criminal offense in India. If have been a victim of cyberbullying, here are a few steps you can take to tackle this criminal offense:

1. Report the account on the social media platform, immediately.
2. You can lodge complaint against your cyberbully on the official- National Cyber Crime Reporting Portal- https://www.cybercrime.gov.in/


CySecK Cyber Security Karnataka
K-Tech CoE for Cyber Security

# ಜಾಗೃತಿ ವೇದಿಕೆ

## ಜಾಗೃತಿ ಭಿತ್ತಿ ಚಿತ್ರಗಳು



**ಪೈರೇಟೆಡ್ ಸಾಫ್ಟ್‌ವೇರ್‌ಗಳನ್ನು ಇನ್‌ಸ್ಟಾಲ್ ಮಾಡಬೇಡಿ!**

**ಆ್ಯಡ್‌ವೇರ್‌ಗಳ ಬಗ್ಗೆ ಎಚ್ಚರವಿರಲಿ**





**ಶೋಲ್ಡರ್ ಸರ್ಫರ್ ಗಳ ಬಗ್ಗೆ ಎಚ್ಚರವಿರಲಿ**

**ಇಮೇಲ್ ಖಾತೆ ಹ್ಯಾಕ್ ಆದರೆ ಏನು ಮಾಡಬೇಕು**



**ಸೈಸೆಕ್ ಸ್ಪರ್ಧೆ #3**

ಅಮೀಶ್ ಅವರಿಗೆ ಯಾರೋಕರೆ ಮಾಡಿ, ತಾವು ಅಮೇಜಾನ್ ಗ್ರಾಹಕ ಸೇವೆಯಿಂದ ಮಾತನಾಡುತ್ತಿರುವುದಾಗಿ ಹೇಳಿದರು. ಅಮೀಶ್ ಅವರು ಕೊನೆಯದಾಗಿ ಸ್ಯಾಮ್‌ಸಂಗ್ ಲ್ಯಾಪ್‌ಟಾಪ್ ಕೊಂಡುಕೊಂಡಿದ್ದರು. ಅದರ ಆಧಾರದ ಮೇಲೆ, ಅಮೀಶ್ ಅವರು ಸ್ಯಾಮ್‌ಸಂಗ್ ಸ್ಮಾರ್ಟ್‌ಫೋನ್ ಒಳಗೊಂಡಂತೆ ಲಕ್ಕಿ ಡ್ರಾ ಬಹುಮಾನ ಗೆದ್ದಿರುವುದಾಗಿ ಕರೆ ಮಾಡಿದವರು ಹೇಳುತ್ತಾರೆ.
ತಮ್ಮ ಕೊನೆಯ ಖರೀದಿಯ ವಿವರಗಳನ್ನು ಕರೆ ಮಾಡಿದವರು ಹಂಚಿಕೊಂಡಾಗ ಅಮೀಶ್ ಅವರಿಗೆ ಅಚ್ಚರಿಯಾಯಿತು. ಬಹುಮಾನಗಳ ವಿಷಯ ಕೇಳಿ ಅವರು ಸಂತೋಷಗೊಂಡು, ಅವನ್ನು ಹೇಗೆ ಪಡೆಯಬಹುದು ಎಂದು ವಿಚಾರಿಸುತ್ತಾರೆ.
"Amazon.Inc" ನಿಂದ ಇಮೇಲ್ ಬಂದಿದೆಯೇ ನೋಡಿ ಎಂದು ಗ್ರಾಹಕ ಸೇವೆಯವರು ಅಮೀಶ್ ಅವರಿಗೆ ಹೇಳುತ್ತಾರೆ. ಬಹುಮಾನಗಳನ್ನು ಪಡೆಯಲು, ಇಮೇಲ್‌ನಲ್ಲಿರುವ ಲಿಂಕ್ ಮೇಲೆ ಕ್ಲಿಕ್ ಮಾಡಿ, ತಮ್ಮ ವೈಯಕ್ತಿಕ ವಿವರಗಳನ್ನು ನೀಡುವಂತೆ ಅಮೀಶ್ ಅವರಿಗೆ ತಿಳಿಸಲಾಗುತ್ತದೆ.

ಮುಂದೇನಾಗುತ್ತದೆ?
ಟ್ವೀಟ್ ಥ್ರೆಡ್‌ನಲ್ಲಿ ಕಥೆಯನ್ನು ಪೂರ್ಣಗೊಳಿಸಿ ಮತ್ತು ನಮ್ಮನ್ನು @CySecKCoE ಎಂದು ಟ್ಯಾಗ್ ಮಾಡಿ.
ಕೊನೆಯ ದಿನಾಂಕ: 09 ಆಗಸ್ಟ್ 2021

# Awareness Corner

## Awareness Posters



[Do not install pirated softwares]

[Beware of Adwares]





[Beware of Shoulder Surfers]

[What to do if email account is hacked?]





### CySecK Contest #3

Amish got a call from someone claiming to be from Amazon customer care department. He informs Amish that on the basis of his last purchase, that of a Samsung laptop, Amish has won a lucky draw prize, including a Samsung smartphone.

Amish is surprised when the executive shares details of his last purchase. He is happy about the freebies and enquires how he can receive the same.

The customer care department asks him to check his mail for an email by "Amazon.Inc" . Amish is asked to follow the link in the email, and provide his personal details to receive the prize.

What happens next?

Complete the story in a tweet thread and tag us @CySecKCoE

Last date: 09 August 2021



# ಸೈಸೆಕ್ ವರದಿ/CySecK Update




ಸಮ್‌ಗಚ್ಛದ್ವಮ್ ಸರಣಿಯ ವೆಬಿನಾರ್‌ಗಳ ಒಂದು ಭಾಗವಾಗಿ- **"SASE – Secure Access Service Edge"** ಎಂಬ ವಿಷಯದ ಕುರಿತು ವಿದ್ಯಾರ್ಥಿಗಳು / ಅಧ್ಯಾಪಕರು / ಕೆಲಸ ಮಾಡುವ ವೃತ್ತಿಪರರಿಗೆ ಉಚಿತ ವೆಬ್‌ನಾರ್ ನಡೆಸಲಾಯಿತು. ಯುನಿಸಿಸ್ ಕಾರ್ಪ್ ಸಂಸ್ಥೆಯ ಶ್ರೀ ಶ್ರೀನಿವಾಸ ರಾಘವನ್, ಕನ್ಸಲ್ಟಿಂಗ್ ಎಂಜಿನಿಯರ್, ಸಿ&ಐ -ಸಂಪನ್ಮೂಲ ವ್ಯಕ್ತಿಯಾಗಿದ್ದರು.

**ವೆಬಿನಾರ್‌ನ ಲಿಂಕ್-** https://www.youtube.com/watch?v=X0iDFWHlFxY

As a part of Samgacchadhwam series of webinars- a free webinar was conducted for students / faculty / working professionals on the topic "SASE – Secure Access Service Edge". Mr Srinivasa Raghavan, Consulting Engineer, C&I, Unisys Corp, was the speaker.

**Link of the webinar-** https://www.youtube.com/watch?v=X0iDFWHlFxY

ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ- Some useful links for staying cyber aware and cyber safe -

1. ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು / To lodge complaint against a cyber-crime - cybercrime.gov.in
2. ತಪ್ಪು ಮಾಹಿತಿ ಗುರುತಿಸಲು /To identify fake information: https://factcheck.ksp.gov.in/
3. ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು / Bengalorians can call 112 for registering complaints related to online frauds.

# ಸೈಸೆಕ್ ಬಗ್ಗೆ /About CySecK

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government's K-Tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.

## Our social media handles

CySeck CoE

@CySecKCoE

CySecKCoE

CySecK

CySecK

CySecKCoE

ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ಧಿಪತ್ರಿಕೆಯ ಮುಕ್ತ ಚಂದಾದಾರರಾಗಿ!
https://zcmp.in/BH6y
If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y